# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಜನವರಿ ೦೩, ೨೦೨೩ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೬ನೇ ಸಭೆಯ ನಡೆವಳಿಗಳು

೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕವಿಹಂ : ಅಧ್ಯಕ್ಷರು

೦೨. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ : ಸದಸ್ಯರು

೦೩. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು

೦೪. ಡಾ. ಕೆ.ಸಿ. ಶಿವಾರೆಡ್ಡಿ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ : ಸದಸ್ಯರು

೦೫. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು

೦೬. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ : ವಿಶೇಷ ಆಹ್ವಾನಿತರು

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

೦೭. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ : ಪದನಿಮಿತ್ತ ಕಾರ್ಯದರ್ಶಿ

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು

೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು : ಸದಸ್ಯರು

೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು

೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು : ಸದಸ್ಯರು

೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು

ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಆರಂಭದಲ್ಲಿ ಸಭೆಗೆ ಸ್ವಾಗತಿಸಿ, ನೂತನವಾಗಿ ಲಲಿತಕಲೆಗಳ ನಿಕಾಯದ ಡೀನರಾಗಿ ನೇಮಕಗೊಂಡ ಡಾ. ಕೆ.ಸಿ. ಶಿವಾರೆಡ್ಡಿ ಅವರನ್ನು ಸಭೆ ಅಭಿನಂದಿಸಿತು. ವಿಜಯಪುರದ ಜ್ಞಾನಯೋಗಾನಂದ ಆಶ್ರಮದ ಶ್ರೀ ಸಿದ್ದೇಶ್ವರಸ್ವಾಮಿ ಅವರ ನಿಧನಕ್ಕೆ ಸಂತಾಪ ಸೂಚಿಸಿತು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೭.೧೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೫ನೇ (ವಿಶೇಷ) ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೦೭.೧೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿ ೨೧೫ನೇ (ವಿಶೇಷ) ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೭.೧೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೫ನೇ (ವಿಶೇಷ) ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೦೭.೧೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೫ನೇ (ವಿಶೇಷ) ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಿತು.

**೨೧೬.೦೧** ಸರ್ಕಾರದ ನಿರ್ದೇಶನದನ್ವಯ ಬೋಧಕ ಹುದ್ದೆಗಳ ನೇಮಕಾತಿ ಮತ್ತು ಮುಂಬಡ್ತಿಯ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಯುಜಿಸಿ ನಿಯಮ ೨೦೧೮ರ ಪ್ರಕಾರ ಬೋಧಕ ಹುದ್ದೆಗಳ ನೇಮಕಾತಿ ಮತ್ತು ಮುಂಬಡ್ತಿಯ ಪರಿನಿಯಮಗಳನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಯೊಂದಿಗೆ ಸಲ್ಲಿಸಲು (ಉನ್ನತ ಶಿಕ್ಷಣ ಇಲಾಖೆಯ ಈ ಕಚೇರಿ ಸಂ. ಇಡಿ ೩೮ ಕೆವಿವಿ ೨೦೨೨ ದಿನಾಂಕ ೦೮.೧೨.೨೦೨೨) ಉನ್ನತ ಶಿಕ್ಷಣ ಇಲಾಖೆಯ ಪತ್ರದಲ್ಲಿ ಕೋರಿರುತ್ತಾರೆ. ಸದರಿ ಪರಿನಿಯಮಾವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ಪರಿನಿಯಮಾವಳಿಗಳನ್ನು ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೧೬.೦೨ ದಿನಾಂಕ ೧೫.೧೨.೨೦೨೨ರಂದು ನಡೆದ ೨೦೨೨-೨೩ನೇ ಸಾಲಿನ ಎರಡನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ಟಿಪ್ಪಣಿ : ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಬೆಂಗಳೂರಿನ ಪ್ರಾದೇಶಿಕ ಕಚೇರಿಯಲ್ಲಿ ದಿನಾಂಕ ೧೫.೧೨.೨೦೨೨ರಂದು ನಡೆದ ೨೦೨೨-೨೩ನೇ ಸಾಲಿನ ಎರಡನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೧೫.೧೨.೨೦೨೨ರಂದು ನಡೆದ ೨೦೨೨-೨೩ನೇ ಸಾಲಿನ ಎರಡನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೬.೦೩ ಡಾ. ಸುಚೇತ ನವರತ್ನ, ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ ಇವರು ದಿನಾಂಕ ೨೨.೧೨.೨೦೨೨ರಂದು ಸ್ವಯಂ ನಿವೃತ್ತಿ ಕೋರಿ ನೀಡಿರುವ ಪತ್ರದ ಕುರಿತು.

ಟಿಪ್ಪಣಿ : ಡಾ. ಸುಚೇತ ನವರತ್ನ, ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ ಇವರು ಸ್ವಯಂ ನಿವೃತ್ತಿ ಕೋರಿ ದಿನಾಂಕ ೨೬.೧೨.೨೦೨೨ರಂದು ಮಾನ್ಯ ಕುಲಸಚಿವರ ಸಮ್ಮುಖದಲ್ಲಿ ನಿವೃತ್ತಿಯನ್ನು ಸ್ವ-ಇಚ್ಛೆಯಿಂದ ಪಡೆಯುತ್ತಿರುವ ಬಗ್ಗೆ ಮೌಖಿಕ ಹೇಳಿಕೆ ಹಾಗೂ ಲಿಖಿತ ಪತ್ರವನ್ನು ನೀಡಿರುತ್ತಾರೆ. ಸದರಿಯವರನ್ನು ಸ್ವಯಂ ನಿವೃತ್ತಿಗೊಳಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ನಿಯಮಾನುಸಾರ ಸ್ವಯಂ ನಿವೃತ್ತಿಗೊಳಿಸಲು ಅನುಮೋದನೆ ನೀಡಿತು.

೨೧೬.೦೪ ಶ್ರೀ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ, ವಿದ್ಯಾರಣ್ಯಪುರಂ, ಮೈಸೂರು ಪರಿಶೀಲನಾ ಸಮಿತಿ ನೀಡಿರುವ ವರದಿ ಕುರಿತು.

ಟಿಪ್ಪಣಿ : ದಿನಾಂಕ ೨೦.೦೮.೨೦೨೨ರಂದು ಶ್ರೀ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ, ವಿದ್ಯಾರಣ್ಯಪುರಂ, ಮೈಸೂರು ಇವರು ಶ್ರೀ ಟಿ.ಎಸ್. ಸುಬ್ಬಣ್ಣ ಸಂಶೋಧನ ಕೇಂದ್ರ ಹೆಸರಿನಲ್ಲಿ ವಿಸ್ತರಣಾ ಕೇಂದ್ರ ಸ್ಥಾಪಿಸಲು ಸಲ್ಲಿಸಿದ ಮನವಿ ಪ್ರಕಾರ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರದ ಪರಿಶೀಲನಾ ಸಮಿತಿ ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಪರಿಶೀಲನಾ ಸಮಿತಿ ವರದಿಯನ್ನು ಸಭೆಯು ಪರಿಶೀಲಿಸಿ, ವರದಿಯನ್ವಯ ವಿಸ್ತರಣಾ ಕೇಂದ್ರಕ್ಕೆ ಮಾನ್ಯತೆ ನೀಡುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಿತು.

೨೧೬.೦೫ ರುದ್ರ ಪ್ರದರ್ಶನ ಕಲೆಗಳ ಅಕಾಡೆಮಿ, ಬೆಂಗಳೂರು ಮಾನ್ಯತಾ ಕೇಂದ್ರ ಪರಿಶೀಲನಾ ಸಮಿತಿ ವರದಿ ಕುರಿತು.

ಟಿಪ್ಪಣಿ : ರುದ್ರ ಪ್ರದರ್ಶನ ಕಲೆಗಳ ಅಕಾಡೆಮಿ ಬೆಂಗಳೂರು ಇವರು ತಮ್ಮ ಮಾನ್ಯತಾ ಕೇಂದ್ರದಲ್ಲಿ ಬಿ. ಮ್ಯೂಜಿಕ್ (ಬಿಪಿಎ), ಎ.ಂ ಮ್ಯೂಜಿಕ್ (ಎಂಪಿಎ) (ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ) ಬಿ.ಡ್ಯಾನ್ಸ್, ಎಂ. ಡ್ಯಾನ್ಸ್ (ಭರತನಾಟ್ಯ) ಕೋರ್ಸ್‌ಗಳಿಗೆ ಮಾನ್ಯತೆ ನೀಡುವ ಸಲುವಾಗಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಪರಿಶೀಲನಾ ಸಮಿತಿಯು ದಿನಾಂಕ ೧೦.೦೮.೨೦೨೨ರಂದು ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಪರಿಶೀಲನಾ ಸಮಿತಿ ವರದಿಯನ್ನು ಸಭೆಯು ಪರಿಶೀಲಿಸಿ, ಸಕಾಲದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಿಕೊಳ್ಳುವ ಷರತ್ತಿನೊಂದಿಗೆ ಸದರಿ ಅಕಾಡೆಮಿಯು ಕೋರಿರುವ ಕೋರ್ಸ್‌ಗಳಿಗೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯನ್ನು ನೀಡಲು ಒಪ್ಪಿಗೆ ಸೂಚಿಸಿತು.

೨೧೬.೦೬ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ (ರಿ) ಬೀದರ ಮಾನ್ಯತಾ ಕೇಂದ್ರ ಪರಿಶೀಲನಾ ಸಮಿತಿ ನೀಡಿರುವ ವರದಿ ಕುರಿತು.

ಟಿಪ್ಪಣಿ : ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ (ರಿ) ಬೀದರ ಇವರಿಗೆ ಪಿಎಚ್.ಡಿ. ಅಧ್ಯಯನವನ್ನು ಪ್ರಾರಂಭಿಸಲು ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ನೀಡುವ ಸಂಬಂಧ ವಿಶ್ವವಿದ್ಯಾಲಯದ ಮಾನ್ಯತಾ ಪರಿಶೀಲನಾ ಸಮಿತಿಯು ದಿನಾಂಕ ೨೧-೧೦-೨೦೨೨ರಂದು ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಪರಿಶೀಲನಾ ಸಮಿತಿ ವರದಿಯನ್ನು ಸಭೆಯು ಪರಿಶೀಲಿಸಿ, ವರದಿಯಲ್ಲಿ ಸೂಚಿಸಲಾದ ನಿರ್ದಿಷ್ಟ ನಿಬಂಧನೆ/ಷರತ್ತುಗಳೊಂದಿಗೆ ಮಾನ್ಯತಾ ಕೇಂದ್ರವನ್ನು ಪ್ರಾರಂಭಿಸಲು ಅನುಮೋದನೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೨೧೬.೦೭ ೨೦೨೦-೨೧ನೇ ಸಾಲಿನ ವಾರ್ಷಿಕ ವರದಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ೨೦೨೦-೨೧ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿ, ಸರ್ಕಾರಕ್ಕೆ ಮುದ್ರಿತ ಪ್ರತಿ ಸಲ್ಲಿಸಲು ಸರ್ವಾನುಮತದಿಂದ ಅನುಮೋದನೆ ನೀಡಿತು.

೨೧೬.೦೮ ಎಸ್.ವಿ.ಎಂ.ವಿ.ವಿ. ಸಂಘದ ಶ್ರೀ ವಿಜಯ ಮಹಾಂತೇಶ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಇಲಕಲ್ಲು, ಬಾಗಲಕೋಟೆ ಜಿಲ್ಲೆ ಪರಿಶೀಲನಾ ಸಮಿತಿ ನೀಡಿರುವ ವರದಿ ಕುರಿತು.

ಟಿಪ್ಪಣಿ : ಶ್ರೀ ವಿಜಯ ಮಹಾಂತೇಶ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಇಲಕಲ್ಲು, ಬಾಗಲಕೋಟೆ ಜಿಲ್ಲೆ ಇವರ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಪರಿಶೀಲನಾ ಸಮಿತಿಯು ದಿನಾಂಕ ೨೯.೧೧.೨೦೨೨ರಂದು ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಪರಿಶೀಲನಾ ಸಮಿತಿ ವರದಿಯನ್ನು ಸಭೆಯು ಪರಿಶೀಲಿಸಿ, ವರದಿಯಲ್ಲಿ ಸೂಚಿಸಲಾದ ನಿಬಂಧನೆ/ಷರತ್ತುಗಳೊಂದಿಗೆ ಮಾನ್ಯತಾ ಕೇಂದ್ರವನ್ನು ಪ್ರಾರಂಭಿಸಲು ಅನುಮೋದನೆ ನೀಡಿತು.

೨೧೬.೦೯ ೩೧ನೇ ನುಡಿಹಬ್ಬ/ಘಟಿಕೋತ್ಸವ ಕಾರ್ಯಕ್ರಮದ ವೆಚ್ಚಗಳ ಕುರಿತು.

ಟಿಪ್ಪಣಿ : ಡಿಸೆಂಬರ್ ೦೮ ಮತ್ತು ೯, ೨೦೨೨ರಂದು ನಡೆದ ೩೧ನೇ ನುಡಿಹಬ್ಬ/ಘಟಿಕೋತ್ಸವ ಕಾರ್ಯಕ್ರಮದ ಅಂದಾಜುವೆಚ್ಚ ರೂ. ೩೧.೦೦ ಲಕ್ಷಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ನುಡಿಹಬ್ಬ/ಘಟಿಕೋತ್ಸವದ ಅಂದಾಜು ವೆಚ್ಚಗಳಿಗೆ ಅನುಮೋದನೆ ನೀಡಿತು.

೨೧೬.೧೦ ಪ್ರಸಾರಾಂಗದ ಪ್ರಕಟಣೆಗಳನ್ನು ಇ-ಪಬ್, ಧ್ವನಿಪುಸ್ತಕ ಹಾಗೂ ಅಮೇಜಾನ್ ಕಿಂಡಲ್‌ಗೆ ಅಳವಡಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ಈ ವರೆಗಿನ ಎಲ್ಲಾ ಪ್ರಕಟಣೆಗಳನ್ನು ಇಪಬ್, ಧ್ವನಿಪುಸ್ತಕ ಹಾಗೂ ಅಮೇಜಾನ್ ಕಿಂಡಲ್‌ಗೆ ಅಳವಡಿಸುವ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿದೆ. ಸದರಿ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಿತು.

೨೧೬.೧೧ ಪ್ರಸಾರಾಂಗದ ಪುಸ್ತಕಗಳ ಮುದ್ರಣದ ಅವಧಿಯನ್ನು ನವೀಕರಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ಪುಸ್ತಕಗಳನ್ನು ಈವರೆಗೆ ಕರ್ನಾಟಕ ಸರ್ಕಾರದ ಉದ್ಯಮವಾದ ಕರ್ನಾಟಕ ಸ್ಟೇಟ್ ಮಾರ್ಕೇಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (MC&A) ಇವರಿಗೆ ಮುದ್ರಣ ಅವಧಿಯನ್ನು ಮುಂದುವರಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ೨೦೨೩ ಜನವರಿ ೧ ರಿಂದ ಅನ್ವಯವಾಗುವಂತೆ ೨೦೨೪ ಡಿಸೆಂಬರ್ ೩೧ರ ವರೆಗೆ ಮುದ್ರಣ ಅವಧಿಯನ್ನು ವಿಸ್ತರಿಸಲು ಅನುಮೋದನೆ ನೀಡಿತು.

೨೧೬.೧೨ ೨೦೧೯-೨೦ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅಂತಿಮ ವರದಿ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ೨೦೧೯-೨೦ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅಂತಿಮ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ೨೦೧೯-೨೦ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅಂತಿಮ ವರದಿಯನ್ನು ಪರಿಶೀಲಿಸಿದ ಸಭೆಯು ಸರ್ಕಾರಕ್ಕೆ ಮುದ್ರಿತ ಪ್ರತಿ ಸಲ್ಲಿಸಲು ಅನುಮೋದನೆ ನೀಡಿತು.

೨೧೬.೧೩ ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೧೫-೧೬ ಮತ್ತು ೨೦೧೬-೧೭ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಅವ್ಯವಹಾರಗಳ ಬಗ್ಗೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಬರೆದಿರುವ ಕ್ರಮಾಂಕ ಇಡಿ ೨೮ ಕೆವಿವಿ ೨೦೨೧ ದಿನಾಂಕ ೧೫.೭.೨೦೨೨ರ ಪತ್ರಕ್ಕೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿ ಸಭೆ ನಿರ್ಣಯ ೨೧೩.೦೯ ದನ್ವಯ ವಿಶ್ವವಿದ್ಯಾಲಯದ ಕಾನೂನು ತಜ್ಞರ ಅಭಿಪ್ರಾಯ ಕೋರಿದ್ದ ಕುರಿತು.

ಟಿಪ್ಪಣಿ : ವಿಶ್ವವಿದ್ಯಾಲಯದ ಕಾನೂನು ತಜ್ಞರು ದಿನಾಂಕ ೩೧.೧೨.೨೦೨೨ರಂದು ಬರೆದಿರುವ ಪತ್ರದಲ್ಲಿ, ಮಾನ್ಯ ನ್ಯಾಯಾಲಯ ಪ್ರಕರಣಗಳ ಕಾರ್ಯಬಾಹುಳ್ಯದಿಂದ ಮತ್ತು ವೈದ್ಯರ ಸಲಹೆ ಮೇರೆಗೆ ಎರಡೂ ಕಣ್ಣುಗಳ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಿರುವುದರಿಂದ ಸಾಕಷ್ಟು ದಾಖಲೆಗಳನ್ನು ಪೂರ್ಣಪ್ರಮಾಣದಲ್ಲಿ ಪರಿಶೀಲಿಸಿ ಅಭಿಪ್ರಾಯವನ್ನು ನಾಲ್ಕು ವಾರಗಳ ನಂತರವಷ್ಟೇ ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಿರುತ್ತಾರೆ.

ನಿರ್ಣಯ : ವಿಶ್ವವಿದ್ಯಾಲಯದ ಕಾನೂನು ತಜ್ಞರು ಸಕಾರಣಗಳೊಂದಿಗೆ ಕೋರಿರುವಂತೆ ಕಾಲಾವಕಾಶ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

೨೧೬.೧೪ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳ ನೇಮಕಾತಿಯ ಶೋಧನಾ ಸಮಿತಿಗೆ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು.

ಟಿಪ್ಪಣಿ : ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ ಇಡಿ ೪೦ ಕೆವಿವಿ ೨೦೨೨ ದಿನಾಂಕ ೦೬.೧೨.೨೦೨೨ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸ್ತುತ ಕುಲಪತಿಯವರ ಅವಧಿಯು ಫೆಬ್ರವರಿ ೨೧, ೨೦೨೩ಕ್ಕೆ

ಮುಕ್ತಾಯಗೊಳ್ಳಲಿದ್ದು, ಆ ಸ್ಥಾನಕ್ಕೆ ನೂತನ ಕುಲಪತಿಗಳ ನೇಮಕಾತಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕಾಯ್ದೆ ೧೯೯೧ ಸೆಕ್ಷನ್ ೧೩(೨)ರ ಅನ್ವಯ ಒಂದು ಶೋಧನಾ ಸಮಿತಿಯನ್ನು ರಚಿಸಬೇಕಾಗಿದೆ ಎಂದು ತಿಳಿಸಿದ್ದಾರೆ. ಈ ಶೋಧನಾ ಸಮಿತಿಗೆ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯು ಶಿಫಾರಸ್ಸು ಮಾಡುವ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಿ ಹೆಸರನ್ನು ಕಳುಹಿಸುವಂತೆ ಸದರಿ ಪತ್ರದಲ್ಲಿ ತಿಳಿಸಿರುತ್ತಾರೆ. ಈ ಶೋಧನಾ ಸಮಿತಿಗೆ ಒಬ್ಬ ಸದಸ್ಯರ ಹೆಸರನ್ನು ಸೂಚಿಸಲು ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ನೂತನ ಕುಲಪತಿಗಳ ನೇಮಕಾತಿಗಾಗಿ ರಚಿಸಲಾಗುವ ಶೋಧನಾ ಸಮಿತಿಗೆ ಸೂಕ್ತರಾದವರ ಹೆಸರನ್ನು ನಾಮನಿರ್ದೇಶನ ಮಾಡುವುದಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು ತಮ್ಮ ವಿವೇಚನೆಯನುಸಾರ ಕ್ರಮವಹಿಸಲು ಸಭೆಯು ಅನುಮೋದನೆ ನೀಡಿತು.

೨೧೬.೧೫ ಸಂಗೀತ ಮತ್ತು ನೃತ್ಯ ವಿಭಾಗದಿಂದ ಡೊಳ್ಳು ಕುಣಿತ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಗೀತ ಮತ್ತು ನೃತ್ಯ ವಿಭಾಗದಿಂದ ಪ್ರಸ್ತುತ ಶೈಕ್ಷಣಿಕ ವರ್ಷದಿಂದಲೇ ಡೊಳ್ಳು ಕುಣಿತಕ್ಕೆ ಸಂಬಂಧಪಟ್ಟ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ನಿಯಮಾನುಸಾರ ಡೊಳ್ಳು ಕುಣಿತ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್‌ನ್ನು ಆರಂಭಿಸಲು ಅನುಮೋದನೆ ನೀಡಿತು.

೨೧೬.೧೬ ಮಾನ್ಯತಾ ಸಂಸ್ಥೆಗಳು ಕನ್ನಡ ವಿಶ್ವವಿದ್ಯಾಲಯದ ಪ್ರಕಟಣೆಗಳನ್ನು ಖರೀದಿಸುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ, ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳು ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಕಟಣೆಗಳ ಕನಿಷ್ಟ ೨ ಪ್ರತಿಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ಸೂಚಿಸಲು ತೀರ್ಮಾನಿಸಿತು.

೨೧೬.೧೭ ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳ ಶುಲ್ಕ, ಮೌಲ್ಯಮಾಪಕರ ಪ್ರಯಾಣ ಭತ್ಯೆ, ಸಂಭಾವನೆ ಹಾಗೂ ಪರಿಶೀಲನಾ ಶುಲ್ಕಗಳ ಪರಿಷ್ಕರಣೆ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ, ಕನ್ನಡ ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳ ಶುಲ್ಕಗಳನ್ನು ಹೆಚ್ಚಿಸಿ, ಮೌಲ್ಯಮಾಪಕರ ಪ್ರಯಾಣ ಭತ್ಯೆ, ಸಭಾ ಭತ್ಯೆ / ಗೌರವ ಸಂಭಾವನೆ ಹಾಗೂ ಪರಿಶೀಲನಾ ಶುಲ್ಕಗಳನ್ನು ಮರು ಪರಿಷ್ಕರಿಸುವ ಸಂಬಂಧ ಈಗಾಗಲೇ ರಚಿಸಲಾದ ಸಮಿತಿಯ ವರದಿಯನ್ನು ಪಡೆದು ವರದಿಯಂತೆ ಕ್ರಮವಹಿಸಲು ತೀರ್ಮಾನಿಸಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು